# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ

## ಕೆ ಆರ್ ನಗರ.

**ಸಿಸಿ.758/2021**

**ಪಿರ್ಯಾದಿ** ಃ ಸರ್ಕಾರದ ಪರ ಕೆ.ಆರ್.ನಗರ ಪೋಲೀಸ್

ವಿರುದ್ಧ

**ಆರೋಪಿ** ಃ ಪರಮೇಶ.ಕೆ.ಹೆಚ್ ಬಿನ್ ಹಾಲಪ್ಪ,

40 ವರ್ಷ, ವಾಸಃ ಬಿಳಿಕೆರೆ ಗ್ರಾಮ,

ಹುಣಸೂರ ತಾಲ್ಲೂಕು.

**ಆರೋಪಣೆ**

ದಿನಾಂಕಃ 06.03.2020 ರಂದು ಸಂಜೆ 4 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಮಂಚನಹಳ್ಳಿ ಗ್ರಾಮದ ಶ್ರೀಕಂಠೇಶ್ವರ ಮಾಡ್ರನ್ ಬಿನ್ನಿ ರೈಸ್ ಮಿಲ್ ಮಂಭಾಗದ ಹಾಸನ-ಮೈಸೂರು ಮುಖ್ಯ ರಸ್ತೆಯ ಎಡಬದಿಯಲ್ಲಿ ಚಾಸಾ 5-ಕುಮಾರ ರವರ ಮಗ ಮೃತ ನಿಂಗರಾಜು ಕೆಎ-13-ಇಎಸ್ 2696 ನೊಂದಣಿಯ ಸ್ಪ್ಲೇಂಡರ್ ಪ್ಲಸ್ ಬೈಕ್ ನಲ್ಲಿ ಚಾಸಾ 1 ಚಂದ್ರಶೇಖರವರನ್ನು ಹಿಂಬದಿ ಕೂರಿಸಿಕೊಂಡು ಕೆಲಸದ ನಿಮಿತ್ತ ಕೆ.ಆರ್.ನಗರಕ್ಕೆ ಬಂದು ಅಲ್ಲಿಂದ ವಾಪಸ್ ಊರಿಗೆ ಹೋಗಲು ಹೋಗುವಾಗ ಅದೇ ಸಮಯಕ್ಕೆ ಎದುರುಗಡೆಯಿಂದ ಅಂದರೆ ಬೇರ್ಯ ಕಡೆಯಿಂ ಬರುತ್ತಿದ್ದ ಕೆಎ-45-ಎಂ-1366 ನೊಂದಣಿಯ ಸ್ಯಾಂಟ್ರೋ ಕಾರಿನ ಚಾಲಕನಾದ ನೀವು ಕಾರನ್ನು ಅತಿವೇಗ ವತ್ತು ಅಜಾಗರೂತೆಯಿಂದ ಓಡಿಸಿಕೊಂಡು ಹೋಗಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಎರಡನೆಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ನಿಂಗರಾಜು ರವರು ಚಾಲನೆ ಮಾಡುತ್ತಿದ್ದ ಕೆಎ-13-ಇಎಸ್-2696 ಬೈಕಿಗೆ ಡಿಕ್ಕಿ ಮಾಡಿದ ಪರಿಣಾಮ ನಿಂಗರಾಜು ಮತ್ತು ಹಿಂಬದಿ ಸವಾರ ಇಬ್ಬರು ಕೆಳಗೆ ಬಿದ್ದು ನಿಂಗರಾಜುವಿಗೆ ತಲೆ ಮತ್ತು ಬಲಗಾಲಿಗೆ ಪೆಟ್ಟಾಗಿದ್ದು ಚಾಸಾ 1 ರವರಿಗೆ ಬಲಗಾಲು ಮಂಡಿ ಮತ್ತು ಮೊಣಕಾಲಿಗೆ

ತೀವ್ರಸ್ವರೂಪದ ಗಾಯವುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 338 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಮೂರನೇಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೃತ ನಿಂಗರಾಜುರವರಿಗೆ ತೀವ್ರಸ್ವರೂಪದಗಳಾಗಿದ್ದ ಕಾರಣ ಅವರು ಮೈಸೂರಿನ ಡಿ.ಆರ್.ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ದಿಃ08.03.2020 ರಂದು ಮಧ್ಯಾಹ್ನ 01.15 ಗಂಟೆ ಸಮಯದಲ್ಲಿ ಮೃತಪಟ್ಟಿರುತ್ತಾರೆ. ಆ ಮೂಲಕ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304 ಎ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಮೂರನೇಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ನಂತರ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸದೇ ಈ ಬಗ್ಗೆ ಮಾಹಿತಿಯನ್ನು ನೀಡದೆ ಸ್ಥಳದಿಂದ ಓಡಿ ಹೋಗಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಮೋಟಾರು ವಾಹನ ಕಾಯಿದೆ 187 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿಃ 28.11.2023

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.